ಅಲ್ಲಿಯ ಜನರಿಗೆ ಕುಡಿಯುವುದಕ್ಕೆ ನೀರಿಲ್ಲದೆ ಬಹಳ ತೊಂದರೆಯಾಗಿದೆ. ನಾನು ೮೮-೮೯ರ ಸಾಲಿನಲ್ಲಿ ಜಿಲ್ಲಾ ಪರಿಷತ್ತಿನಲ್ಲಿ ಈ ಬಗ್ಗೆ ಪ್ರಶ್ನೆಯನ್ನು ಕೇಳಿದಾಗ ನಾವು ಪ್ರತಿ ವರ್ಷವೂ ಕುಡಿಯುವ ನೀರಿನ ತೊಂದರೆಯನ್ನು ನಿವಾರಿಸುತ್ತಿದ್ದೇವೆಂದು ಹೇಳಿದರು. ನಾನು ಕೇಳಿರುವ ಕೆಲವು ಗ್ರಾಮಗಳ ಜನರು ಎತ್ತಿನ ಬಂಡಿಗಳ ಮೇಲೆ ಕುಡಿಯುವ ನೀರನ್ನು ಬಹಳ ದೂರದಿಂದ ತರುತ್ತಿದ್ದಾರೆ. ಆದರೆ ಎತ್ತಿನ ಬಂಡಿಯೇ ಇಲ್ಲದಿರುವವರ ಗತಿ ಏನು ? ನಾನು ಕೇಳಿರುವ ಈ ಎಲ್ಲಾ ಗ್ರಾಮಗಳಲ್ಲೂ ಕುಡಿಯುವ ನೀರಿನ ಸಮಸ್ಯೆ ಬಹಳವಾಗಿದೆ. ಆದ್ದರಿಂದ ಈ ಎಲ್ಲಾ ಗ್ರಾಮಗಳಲ್ಲೂ ಕಿರು ನೀರು ಸರಬರಾಜು ಯೋಜನೆ ಮತ್ತು ಗ್ರಾಮಾಂತರ ನೀರು ಸರಬರಾಜು ಯೋಜನೆಗಳ ಕಾರ್ಯವನ್ನು ಕೈಗೊಂಡು ಜನರಿಗೆ ಕುಡಿಯಲು ನೀರನ್ನೊದಗಿಸುವ ವ್ಯವಸ್ಥೆ ಮಾಡಬೇಕಾಗಿ ವಿನಂತಿಸುತ್ತೇನೆ. ಮತ್ತೆ ಇಲ್ಲಿಯವರೆಗೆ ಕೆಲಸ ವಿಳಂಬ ಮಾಡಿರುವ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕುಡಿಯುವ ನೀರಿನ ಸಲುವಾಗಿ ಹಣ ಮಂಜೂರಾತಿಯಾಗಿದ್ದರೂ ಕ್ರಮ ತೆಗೆದುಕೊಂಡಿಲ್ಲ, ಕೆಲಸ ಪೂರ್ಣವಾಗಿಲ್ಲವೆಂದು ಆರೋಪ ಮಾಡಿರುತ್ತಾರೆ, ಈ ವಿಚಾರ ಇದುವರೆವಿಗೂ ನನ್ನ ಗಮನಕ್ಕೆ ಬಂದಿರಲಿಲ್ಲ, ಈಗ ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದಿರುತ್ತಾರೆ. ಇವತ್ತೇ ಈ ಬಗ್ಗೆ ಆದೇಶ ಕೊಡುತ್ತೇನೆ.

ಬೆಂಗಳೂರು ನಗರದಲ್ಲಿರುವ ಕೆ.ಎಂ. ಎಫ್ ಹಾಲು ಮಾರಾಟ ಮಳಿಗೆಗಳು

೮೬. ಶ್ರೀ ಪೆರಿಕಲ್ ಎಂ, ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಹಾಗೂ ಪಶು ಸಂಗೋಪನೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ) ಬೆಂಗಳೂರು ನಗರದಲ್ಲಿರುವ ಕೆ.ಎಂ.ಎಫ್. ಬೂತ್‌ಗಳ ಸಂಖ್ಯೆ :

ಬಿ) ಚಿಕ್ಕಪೇಟೆ ನಗರಸಭಾ ಕ್ಷೇತ್ರದಲ್ಲಿರುವ ಬೂತ್‌ಗಳ ಸಂಖ್ಯೆ :

ಸಿ) ಬೂತ್‌ಗಳ ನಿರ್ವಹಣೆಗಾಗಿ ಪ್ರತಿ ತಿಂಗಳು ಕೆ.ಎಂ.ಎಫ್.ನಿಂದ ತಗಲುವ ವೆಚ್ಚ ?

ಡಿ) ಬೂತ್‌ಗಳಿಂದ ಆಗುತ್ತಿರುವ ಲಾಭ ಅಥವಾ ನಷ್ಟ.

ಇ) ವರ್ಷದಲ್ಲಿ ಆಗುವ ಒಟ್ಟಾರೆ ನಷ್ಟದ ಬಗ್ಗೆ ವಿವರಿಸುವುದು.

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶು ಸಂಗೋಪನಾ ಸಚಿವರು).—

ಎ) ೧೨೧

ಬಿ) ೧ (ಬೂತ್ ಸಂಖ್ಯೆ : ೨೦೨)

ಸಿ) ಪ್ರತಿ ತಿಂಗಳು ರೂ. ೪೧೧೦-೮೦

ಡಿ) ೧೨೧ ಬಲ್ಕ್‌ವೆಂಡಿಂಗ್ ಬೂತ್‌ಗಳನ್ನು ನಿರ್ವಹಿಸುತ್ತಿರುವ ಮಾತೃ ಡೈರಿಯು ೧೯೮೯-೯೦ನೇ ಸಾಲಿನಲ್ಲಿ ೧೦ ತಿಂಗಳ ಅವಧಿಯಲ್ಲಿ (ಅಂದರೆ ೧-೪-೮೯ ರಿಂದ ೩೧-೧-೯೦ರವರೆಗೆ) ರೂ. ೪೦.೦೫ ಲಕ್ಷ ಲಾಭವನ್ನು ಗಳಿಸಿರುತ್ತದೆ. (ಪ್ರಾವಿಷನಲ್ ಲಾಭ ಮತ್ತು ನಷ್ಟ ತಃಖ್ತೆಯ ಪ್ರಕಾರ)

ಇ) ಪ್ರಶ್ನೆ (ಡಿ) ರಲ್ಲಿ ವಿವರಿಸಿದಂತೆ ಮಾತೃ ಡೈರಿಯು ಲಾಭ ಗಳಿಸುತ್ತಿರುವುದರಿಂದ ನಷ್ಟ ಉಂಟಾಗಿರುವುದಿಲ್ಲ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಬೆಂಗಳೂರು ನಗರದಲ್ಲಿ ಒಟ್ಟು ೧೨೧ ಬಲ್ಕ್‌ವೆಂಡಿಂಗ್ ಹಾಲು ಸರಬರಾಜು ಬೂತ್‌ಗಳಿವೆ ಎಂದು ಹೇಳಿದ್ದಾರೆ. ಬೆಂಗಳೂರಿನಲ್ಲಿ ಆವರೇಜ್ ೧೨ ಅಸೆಂಬ್ಲಿ ಕ್ಷೇತ್ರಗಳು ಬರುತ್ತವೆ. ಚಿಕ್ಕಪೇಟೆ ಕ್ಷೇತ್ರದಲ್ಲಿ ಒಂದು ಲಕ್ಷಕ್ಕೂ ಮಿಗಿಲಾಗಿ ಜನಸಂಖ್ಯೆ ಇರುತ್ತದೆ. ಹೆಚ್ಚಿಗೆ ಜನಸಂಖ್ಯೆ ಇರುವ ಈ ಕ್ಷೇತ್ರದಲ್ಲಿ ಒಂದೇ ಒಂದು ಬೂತ್‌ನಿಂದ ಹಾಲನ್ನು ಸಪ್ಲೈ ಮಾಡುತ್ತಿರುತ್ತಾರೆ ಜನಸಾಸ್ತಿ ಇರುವ ಕಡೆ ಹಾಲಿನ ಸರಬರಾಜು ಬೂತ್‌ಗಳನ್ನು ಜಾಸ್ತಿ ಮಾಡಬೇಕು. ಇದರಿಂದ ಬೇರೆ ಅಸೆಂಬ್ಲಿ ಕ್ಷೇತ್ರದಲ್ಲಿರತಕ್ಕ ಬೂತ್‌ಗಳಿಗೆ ಜನ ನಡೆದುಕೊಂಡು ಹೋಗಿ ಹಾಲನ್ನು ಕೊಂಡುಕೊಳ್ಳುವುದು ತಪ್ಪುತ್ತದೆಂದು ನಾನು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಏನೂ ಒಂದು ಬೇಡಿಕೆಯನ್ನು ಇಟ್ಟಿರುತ್ತಾರೆ ಅದನ್ನು ಪೂರ್ಣಗೊಳಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಮಿಲ್ಕ್ ಸಪ್ಲೈ ವಿಚಾರದಲ್ಲಿ ಬೆಂಗಳೂರು ಸಿಟಿಯಲ್ಲಿ ಎಲ್ಲಿ ಸರಬರಾಜು ಆಗುತ್ತಿದೆ, ಎಲ್ಲಿ ಆಗುತ್ತಿಲ್ಲ ಎನ್ನುವ ಬಗ್ಗೆ ತೀವ್ರವಾಗಿ ಗಮನಹರಿಸುತ್ತೇನೆ. ಮತ್ತು ಚಿಕ್ಕಪೇಟೆ ಕ್ಷೇತ್ರದಲ್ಲಿ ಹೆಚ್ಚು ಬೂತ್‌ಗಳು ಬೇಕೆಂದರೆ ಮುಂದೆ ಅದನ್ನು ಪರಿಶೀಲನೆ ಮಾಡಿ ಮಂಜೂರು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ.—ತಾವು ಆವರೇಜ್ ಪಾಪ್ಯುಲೇಷನ್ ಮೇಲೆ ಹಾಲಿನ ಬೂತ್‌ಗಳನ್ನು ಓಪನ್ ಮಾಡಬೇಕು. ಇಡೀ ಅಸೆಂಬ್ಲಿ ಕ್ಷೇತ್ರದಲ್ಲಿ ಸುಮಾರು ಒಂದೂಕಾಲು ಲಕ್ಷ ಜನಸಂಖ್ಯೆ ಇರುವ ಕಡೆ ಒಂದೇ ಒಂದು ಬೂತ್‌ನ್ನು ಕೊಟ್ಟರೆ ಜನರಿಗೆ ಬಹಳ ತೊಂದರೆಯಾಗುತ್ತದೆ. ಪಾಪ್ಯುಲೇಷನ್ ಬೇಸ್ ಇಟ್ಟುಕೊಂಡು ಹಾಲು ಸರಬರಾಜು ಬೂತ್‌ಗಳನ್ನು ತೆಗೆಯಬೇಕು. ಈಗಾಗಲೇ ಬೆಂಗಳೂರು ಸಿಟಿಯಲ್ಲಿ ೮೭ ಕಾರ್ಪೊರೇಷನ್ ಡಿವಿಜನ್‌ಗಳು ಇರುತ್ತವೆ. ನಮ್ಮಲ್ಲಿ ಆರು ಕಾರ್ಪೊರೇಷನ್ ಡಿವಿಜನ್‌ಗಳಿವೆ. ಒಂದೊಂದು ಕಾರ್ಪೊರೇಷನ್ ಡಿವಿಜನ್‌ಗೂ ಒಂದೊಂದು ಬೂತ್‌ನ್ನು ಓಪನ್ ಮಾಡಿದರೆ ಅಲ್ಲಿಯ ಜನರಿಗೆ ಬಹಳ ಅನುಕೂಲವಾಗುತ್ತದೆ. ಹೀಗೆ ಮಾಡಿದರೆ ಕೆ.ಎಂ.ಎಫ್- ಹಾಲನ್ನು ಜನರು ಕೊಂಡುಕೊಳ್ಳುತ್ತಾರೆ. ಇಲ್ಲದಿದ್ದರೆ ಖಾಸಗಿ ಹಾಲು ಮಾರಾಟಗಾರರಿಂದ ಹಾಲನ್ನು ಕೊಂಡುಕೊಳ್ಳಬೇಕಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರ ಸಲಹೆ ಬಹಳ ಸ್ವಾಗತಾರ್ಹವಾದ ಸಲಹೆಯಾಗಿರುತ್ತದೆ. ನಾನು ಇನ್ನು ಎಂಟು ದಿವಸಗಳಲ್ಲಿಯೇ ಬೆಂಗಳೂರು ಸಿಟಿಗೆ ಆವರ ಬೇಡಿಕೆಯ ಆಧಾರದಮೇಲೆ ಯಾವರೀತಿ ಬೂತ್‌ಗಳನ್ನು ಹೆಚ್ಚಿಸಬೇಕು ಎನ್ನುವ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ.

ಬಳ್ಳಾರಿ ವೈದ್ಯಕೀಯ ಮಹಾ ವಿದ್ಯಾಲಯದಲ್ಲಿ ಖಾಲಿ ಹುದ್ದೆಗಳನ್ನು ತುಂಬುವುದು

೨೧೮. ಶ್ರೀ ಎ. ರಾಮಪ್ಪ (ಬಳ್ಳಾರಿ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಪ್ರಾಂಶುಪಾಲರ ಹುದ್ದೆಯು ಸುಮಾರು ಒಂದೂವರೆ ವರ್ಷದಿಂದ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇಲ್ಲಿಯವರೆವಿಗೂ ಪ್ರಾಂಶುಪಾಲರ ಹುದ್ದೆಯನ್ನು ಭರ್ತಿ ಮಾಡದಿರಲು ಕಾರಣವೇನು?

ಇ) ಈ ಹುದ್ದೆಯನ್ನು ಬೇಗನೆ ಭರ್ತಿ ಮಾಡಲು ಸರ್ಕಾರವು ಕ್ರಮ ತೆಗೆದುಕೊಂಡಿದೆಯೇ?

ಈ) ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ಮತ್ತು ಯಾವ ದಿನಾಂಕದಿಂದ ಹುದ್ದೆಗಳು ಖಾಲಿ ಇದೆ (ವಿಭಾಗವಾರು ಸಂಖ್ಯೆಗಳನ್ನು ಒದಗಿಸುವುದು).

ಉ) ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ಕ್ರಮ ತೆಗೆದುಕೊಂಡಿದೆಯೇ ?

ಶ್ರೀ ಪತಿ ಮನೋರಮ ವಂಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ಸಹಕಾರ ಸಚಿವರು).—

ಅ) ಹೌದು

ಆ) ಹಿಂದಿನ ಪ್ರಾಂಶುಪಾಲರುದ ಡಾ. ಪಾರ್ಥಸಾರತಿಯವರು ವರ್ಗಾವಣೆ ಹೊಂದಿ ಹೋದ ನಂತರ ಇಬ್ಬರನ್ನು ಈ ಹುದ್ದೆಗೆ ನಿಯಮಿಸಿದರೂ ಹಲವಾರು ಆಡಳಿತಾತ್ಮಕ ಕಾರಣಗಳಿಂದ ಅವರು ಕೆಲಸಕ್ಕೆ ಹಾಜರಾಗಿಲ್ಲ.

ಇ) ಹೌದು

ಈ) ಒಟ್ಟು ೮೨ ಹುದ್ದೆಗಳು. ಯಾವ ದಿನಾಂಕದಿಂದ ಮತ್ತು ವಿಭಾಗವಾರು ವಿವರಗಳನ್ನು ಪ್ರತ್ಯೇಕವಾಗಿ ಮಾಹಿತಿಯನ್ನು ತಯಾರಿಸಿ ಈ ಉತ್ತರದೊಂದಿಗೆ ಲಗತ್ತಿಸಿದೆ.

ಉ) ಹೌದು